ಒಂದೇ ಆಶ್ರಮದಲ್ಲಿದ್ದು ದಿನಾಲೂ ನಾವಿಬ್ಬರು ಸಂಧಿಸುತ್ತಿರುವಾಗ ಒಂದೋ ಅಪರಿಚಿತರಂತೆ ವರ್ತಿಸಬೇಕು. ಇಲ್ಲವೇ ಸ್ನೇಹಿತರಂತಿರಬೇಕು. ಆಗೆಲ್ಲ ಎಲ್ಲೆ ಮೀರಿ ನಿನ್ನ ಸಾಮಿಪ್ಯಕ್ಕೆ ಬಾರದಂತೆ ನಾನು ನನ್ನನ್ನು ಹಿಡಿದಿಟ್ಟುಕೊಳ್ಳುವುದು ಕಷ್ಟ ಸಾಧ್ಯ. ಸುಜಾತಾ, ನೀನು, ನಾನು ಎಟಕಲಾರದ ಎತ್ತರಕ್ಕೆ ಬೆಳೆದು ಬಿಟ್ಟೆ. ಒಂದು ಕಾಲದಲ್ಲಿ ನನಗದು ಸಹಿಸಲಾರದ ಸಂಗತಿಯಾಗಿತ್ತು. ಆದರೆ ಈಗ ನಿನ್ನ ಬಗ್ಗೆ ನನಗೆ ಬಹಳ ಹೆಮ್ಮೆ ಇದೆ.

ನನ್ನ ಕಾಟೇಜನ್ನು ನಿನ್ನ ಹೆಸರಿಗೆ ವರ್ಗಾಯಿಸಿದ ಎಲ್ಲ ದಾಖಲೆ ಪತ್ರಗಳಿಗೆ ಸಹಿ ಹಾಕಿ ಶ್ರೀನಿವಾಸರಾಯರ ಬಳಿ ಕೊಟ್ಟಿದ್ದೇನೆ. ಇದು ನನ್ನ ಉಡುಗೊರೆ ನಿನಗೆ. ನಮ್ಮಿಬ್ಬರ ಬಾಲ್ಯದ ಸವಿ ನೆನಪಿಗೆ. ದಯವಿಟ್ಟು ನಿರಾಕರಿಸ ಬೇಡ. ಅದನ್ನು ಇಟ್ಟು ಕೊಳ್ಳುವುದು, ಇಲ್ಲವೇ ಅರ್ಹರಿಗೆ ದಾನಮಾಡುವುದು ನಿನಗೆ ಬಿಟ್ಟ ವಿಷಯ. ನಾನು ಬೇರೆ ಕಡೆ ವಾಸ್ತವ್ಯದ ವ್ಯವಸ್ಥೆ ಮಾಡಿಕೊಂಡಿದ್ದೇನೆ.

ನಾಳೆ ಬೆಳಿಗ್ಗೆ ನೀನು ಎಚ್ಚರಗೊಳ್ಳುವ ಮೊದಲೇ ನಾನು ಹೊರಟು ಹೋಗುತ್ತೇನೆ. ಇನ್ನೆಂದೂ ನಿನ್ನನ್ನು ಕಾಡುವುದಿಲ್ಲ. ನಿನಗೆ, ನಿನ್ನ ಆದರ್ಶಗಳಿಗೆ ಒಳ್ಳೆಯದಾಗಲಿ. ದೇವರು ನಿನ್ನನ್ನು ಕಾಪಾಡಲಿ.

— ಶಶಿಕಾಂತ್

ಪತ್ರ ಓದಿ ಮುಗಿಸಿದಾಗ ಅವಳ ಕಣ್ಣುಗಳು ಮಂಜಾದವು. ಪತ್ರದಿಂದ ತಲೆ ಎತ್ತಿದಾಗ ಶ್ರೀನಿವಾಸ ರಾಯರ ಪಕ್ಕದಲ್ಲಿ ಅವರ ಪತ್ನಿಯೂ ಬಂದು ನಿಂತಿದ್ದರು. ಪತ್ರವನ್ನು ಅವರ ಕೈಗಿತ್ತು ಸಮರ್ಪಣಾ ಭಾವದಿಂದ ಬಗ್ಗಿ ಅವರಿಬ್ಬರ ಕಾಲಿಗೆರಗಿ ಮೇಲಕ್ಕೇಳುವಾಗ ಅವರಿಬ್ಬರ ಕಣ್ಣುಗಳಿಂದ ಉದುರಿದ ಆನಂದಬಾಷ್ಪ ತನ್ನ ತಲೆಯ ಮೇಲೆ ಬಿದ್ದ ಅರಿವು ಅವಳಿಗೆ ಆಗದೆ ಇರಲಿಲ್ಲ.


## ಜಯಂತಿ ಪೈ

ಲೇಖಕಿ ಕಾಸರಗೋಡಿನವರು. ಪದವಿಯವರೆಗೆ ವಿದ್ಯಾಭ್ಯಾಸ. ಬ್ಯಾಂಕ್ ಉದ್ಯೋಗಿಯಾಗಿ ದಶಕಗಳ ಕಾಲ ಕೆಲಸ ಮಾಡಿ ನಿವೃತ್ತರಾಗಿದ್ದಾರೆ. ಪ್ರಸ್ತುತ ತಮಿಳುನಾಡಿನ ಕೊಯಮತ್ತೂರಿನಲ್ಲಿ ನೆಲೆಸಿದ್ದಾರೆ. ಇವರ ಸಣ್ಣ ಕಥೆಗಳು, ಲಘು ಬರಹಗಳು, ನಗೆ ಬರಹಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.